**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ. ಎಮ್. ಎಫ್. ಸಿ, ನ್ಯಾಯಾಲಯ ಅಥಣಿ.**

**ಸಿ.ಸಿ. ನಂ. :2600/2019** **ದಿನಾಂಕ: 09.02.2026**
**ಸಿ ಡಬ್ಲೂ : 8**
**ಪಿ ಡಬ್ಲೂ : 8**

---------------------------------------------------------------------------------

**:ಸಾಕ್ಷಿ ಗೆ ಪ್ರಮಾಣ ವಚನ ಭೋದಿಸಲಾಯಿತು:**

****

| | |
|---|---|
| ಸಾಕ್ಷಿದಾರನ ಹೆಸರು | ಡಾ: ಬಾಲಚಂದ್ರ ಪಾಟೀಲ |
| ಗಂಡ/ ತಂದೆಯ ಹೆಸರು | ಪಾಂಡುರಂಗ |
| ವಯಸ್ಸು | 65 ವರ್ಷ |
| ಉದ್ಯೋಗ | ಡಾಕ್ಟರ |
| ವಾಸಸ್ಥಳ | ಸಾ: ಮಿರಜ |

**ಮುಖ್ಯ ವಿಚಾರಣೆ:- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:**

ನಾನು 26 ವರ್ಷಗಳಿಂದ ಮಿರಜನಲ್ಲಿ ವೈದ್ಯ ವೃತ್ತಿಯನ್ನು ಮಾಡುತ್ತಿದ್ದೇನೆ . ದರೆಪ್ಪ ಶಿವಪ್ಪ ಸಳುಟಗಿ, ವಯಸ್ಸು 31 ವರ್ಷ ಎಂಬ ವ್ಯಕ್ತಿಯು ನನ್ನಲ್ಲಿ ಚಿಕಿತ್ಸೆ ಪಡೆಯಲು ದಿ: 21.05.2019ರಂದು ಬಂದಿದ್ದು ರಸ್ತೆ ಅಪಘಾತದ ಮೂರು ವಾರಗಳ ಹಿಂದಿನ ಇತಿಹಾಸದೊಂದಿಗೆ ಬಂದಿದ್ದು ಅವರು ಮೊದಲೆ ಬೇರೆ ಕಡೆ ಚಿಕಿತ್ತೆಯನ್ನು ಪಡೆದಿದ್ದರು ನನ್ನ ಬಳಿ ಬಂದಾಗ ಕೈಯಲ್ಲಿ ಪ್ಲಾಸ್ಟರನ್ನು ಹಾಕಿಕೊಂಡು ಬಂದಿದ್ದರು ನಾನು ಅದನ್ನು ತೆಗೆದು ಪರಿಕ್ಷಿಸಿ ನೋಡಲಾಗಿ ಕೈಯಲ್ಲಿ ಇನಪೆಕ್ಷನ ಇರುವುದು ಕಂಡುಬಂದಿರುತ್ತದೆ. ಮತ್ತು ಕೈಯಲ್ಲಿ ಊತ ಕಂಡುಬಂದಿರುತ್ತದೆ ಮತ್ತು ಅಂಗೈಯಲ್ಲಿ ತರಚಿದ ಗಾಯಗಳು ಕಂಡುಬಂದಿರುತ್ತವೆ. ನಾನು ಸದರಿ ವ್ಯಕ್ತಿಗೆ ಒಳರೋಗಿಯಾಗಿ ಚಿಕಿತ್ಸೆ ಪಡೆಯಲು ಸಲಹೆ ನೀಡಿದಂತೆ ಸದರಿ ವ್ಯಕ್ತಿ ದಿ: 22.05.2019 ರಂದು ಬಂದು ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತಾರೆ. ನಂತರ ಅವರಿಗೆ 6 ದಿನಗಳ ವರೆಗೆ ಚಿಕಿತ್ಸೆಯನ್ನು ನೀಡಿದ್ದು 27.05.2019 ರಂದು ಡಿಸ್ಚಾರ್ಜ ಮಾಡಿ ಕಳುಹಿಸಲಾಗಿರುತ್ತದೆ. ಸದರಿ ವ್ಯಕ್ತಿ ತೀವ್ರ ಗಾಯವನ್ನು ಹೊಂದಿದ್ದು ಅದರಂತೆ ನಾನು ವೈದ್ಯಕಿಯ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸಾಕ್ಷಿಯು ತಾನು ನೀಡಿದ ಗಾಯದ ಪ್ರಮಾಣ ಪತ್ರವನ್ನು ಮತ್ತು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಗಾಯದ ಪ್ರಮಾಣ ಪತ್ರವನ್ನು ಈಗಾಗಲೇ ನಿಪಿ

13 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ 13 ಬಿ ಎಂದು ಗುರುತಿಸಲಾಯಿತು. ನಾನು ಸದರಿ ವ್ಯಕ್ತಿಯನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿತನನ್ನು ನೋಡಿ ಸಾಕ್ಷಿಯು ಗುರುತಿಸುತ್ತಾರೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ . ಕೆ ಎ ವಿ ವಕೀಲರಿಂದಃ</u>**

ಒಬ್ಬ ವ್ಯಕ್ತಿ ಸಾಮಾನ್ಯವಾಗಿ ಗಟ್ಟಿಯಾದ ನೆಲಕ್ಕೆ ಬಿದ್ದಾಗ ಆಗುವಂತಹ ಗಾಯಗಳು ಎಂದರೆ ಸರಿ

**<u>ಮರು ವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಹಾಗೂ ಜೆ.ಎಮ್.ಎಫ್.ಸಿ.ನ್ಯಾಯಾಲಯ, ಅಥಣಿ.